MANGALORE MARKET REPORTS
MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 16-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಯು.ಎಸ್ ಜೋಳ ದರ ದಶಕ ದಾಖಲೆ ಹೆಚ್ಚಳ

ಬಿಹು ಪೂರೈಕೆಯಿಂದ ಯು.ಎಸ್. ಜೋಳ ಫ್ಯೂಚರ್ ದರ 2012 ರ ನಂತರ ಹೆಚ್ಚಳ ಕಂಡಿದೆ. ಜಾಗತಿಕ ಪೂರೈಕೆ ಇಳಿಕೆಯಿಂದ ದರ ಹೆಚ್ಚಳವಾಗುತ್ತಿದೆ.

## ಯು.ಎಸ್ ಸೋಯಾಬೀನ್ ಎಣ್ಣೆ ಮಾರ್ಚ್ ದಾಸ್ತಾನು ಇಳಿಕೆ

ಸೋಯಾಬೀನ್ ಎಣ್ಣೆ ಯು.ಎಸ್. ಮಾರ್ಚ್ ದಾಸ್ತಾನು 7.3 ಶೇಕಡಾ ಇಳಿಕೆಯಾಗಿದ್ದು CBOT ಸೋಯಾಬೀನ್ ಎಣ್ಣೆ ಬುಧವಾರ ಸರ್ವಕಾಲಿಕ ದಾಖಲೆ ಹೆಚ್ಚಳ ದಾಖಲಿಸಿದೆ. ಸೋಯಾಮೀಲ್ ದರ 1 ಶೇಕಡಾ ಕಂಡಿದೆ. ಮಲೇಶಿಯನ್ ಪಾಮೆಣ್ಣೆ ದರವೂ ಹೆಚ್ಚಳ ಕಂಡಿದೆ. ದಾಸ್ತಾನು ಇಳಿಕೆ, ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗಿದೆ. ಹಿಂದಿನ ವಾರ 9 ಶೇಕಡಾ ಗಳಿಕೆ ಕಂಡ ಮಲೇಶಿಯನ್ ಪಾಮೆಣ್ಣೆ ದರ ಇಂದೂ ಹೆಚ್ಚಳ ಕಂಡಿದೆ.

## ಭಾರತದ ಸಕ್ಕರೆ ಉತ್ಪಾದನೆ ಎಪ್ರಿಲ್ 15, 2022 ರ ತನಕ 329.91 ಲಕ್ಷ ಟನ್

ಎಪ್ರಿಲ್ 15,2022 ರ ತನಕ 2021-2022 ಸೀಜನ್‌ನಲ್ಲಿ ಭಾರತದ ಸಕ್ಕರೆ ಉತ್ಪಾದನೆ 329.91 ಲಕ್ಷ ಟನ್‌ಗಳಾಗಿವೆಯೆಂದು ISMA ಹೇಳಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಉತ್ಪಾದನೆಯಾದ 291.82 ಲಕ್ಷ ಟನ್‌ಗಳಿಂದ 38.09 ಲಕ್ಷ ಟನ್‌ಗಳಷ್ಟು ಹೆಚ್ಚಳವಾಗಿದೆ. ಈ ವರ್ಷ ಭಾರತದ ಸಕ್ಕರೆ ರಫ್ತು 90 ಲಕ್ಷ ಟನ್‌ಗಳಿಗೇರಬಹುದೆನ್ನಲಾಗಿದೆ.